ANNEXURE-5

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012ರಡಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸುವ ಬಗ್ಗೆ.

**ಓದಲಾಗಿದೆ:**

1. ದಿನಾಂಕ: 07.03.2012ರ ಅಧಿಸೂಚನೆ ಸಂ: ಸಿಆಸುಇ 43 ಸೇವನೆ 2008.
2. ದಿನಾಂಕ: 06.08.2012ರ ಅಧಿಸೂಚನೆ ಸಂ: ಸಿಆಸುಇ 59 ಸೇವನೆ 2012.
3. ದಿನಾಂಕ: 18.12.2012ರ ಅಧಿಸೂಚನೆ ಸಂ: ಸಿಆಸುಇ 43 ಸೇವನೆ 2008.
4. ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಇವರ ದಿನಾಂಕ: 16.11.2012ರ ಪತ್ರ ಸಂ: ಕಿಯಾನಿಕ್ಸ್: ಐ.ಟಿ.ಇ.ಎಸ್.ಕ.ಸಾ.ಪ:2012-13.
5. ದಿನಾಂಕ: 01.02.2014ರ ಸರ್ಕಾರದ ಪತ್ರ ಸಂ: ಸಿಆಸುಇ 43 ಸೇವನೆ 2008.
6. ದಿನಾಂಕ: 29.01.2014ರ ಅಧಿಸೂಚನೆ ಸಂ; ಆಇ 31 ವೆಚ್ಚ-12/14.

**ಪ್ರಸ್ತಾವನೆ:**

1. ಮೇಲೆ (1)ರಲ್ಲಿ ಓದಲಾದ ದಿನಾಂಕ: 07.03.2012ರ ಅಧಿಸೂಚನೆಯನ್ವಯ ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012ನ್ನು ರಚಿಸಲಾಗಿದೆ. ನಂತರ, ಮೇಲೆ (2)ರಲ್ಲಿ ಓದಲಾದ ದಿನಾಂಕ: 06.08.2012ರ ಅಧಿಸೂಚನೆಯನ್ವಯ ನೇರ ನೇಮಕಾತಿಯ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಸದರಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದೆ. ತದನಂತರ, ಮೇಲೆ (3)ರಲ್ಲಿ ಓದಲಾದ ದಿನಾಂಕ: 18.12.2012ರ ಅಧಿಸೂಚನೆಯನ್ವಯ ಸದರಿ ಸಾಕ್ಷರತಾ ಪರೀಕ್ಷೆಗೆ ಸಂಬಂಧಿಸಿದಂತೆ ಪಠ್ಯಕ್ರಮ (Syllabus), ಪರೀಕ್ಷೆಯ ಸ್ವರೂಪ (Pattern of testing) ಇತ್ಯಾದಿಗಳನ್ನು ನಿಗದಿಪಡಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಕಲಂ 4(ಜಿ) ಅಡಿ ವಿನಾಯಿತಿ ಹೊಂದಿರುವ ಕಿಯಾನಿಕ್ಸ್ ಸಂಸ್ಥೆಯಿಂದಲೇ ಕಂಪ್ಯೂಟರ್ ಸಾಕ್ಷರತಾ ತರಬೇತಿ ನೀಡಿ ಪರೀಕ್ಷೆ ನಡೆಸಲು ಆದೇಶಿಸುವಂತೆ. ಮೇಲೆ (4)ರಲ್ಲಿ ಓದಲಾದ ಅವರ ದಿನಾಂಕ: 16.11.2012ರ ಪತ್ರದನ್ವಯ, ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, ಇವರು ಕೋರಿರುತ್ತಾರೆ. ಸದರಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ನಡೆಸುವ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ದಿನಾಂಕ: 24.01.2014ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳ ಪ್ರತಿಯನ್ನು, ಮೇಲೆ (5)ರಲ್ಲಿ ಓದಲಾದ ದಿನಾಂಕ: 01.02.2014ರ ಸರ್ಕಾರದ ಪತ್ರದನ್ವಯ, ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ. ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಳ್ಳುವ ಕುರಿತಂತೆ ಸದರಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಮುಖ್ಯಾಂಶಗಳನ್ನು ಈ ಕೆಳಗೆ ನಮೂದಿಸಿದೆ:-

(1) ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯ ಸಂಪೂರ್ಣ ನೇತೃತ್ವ ಹಾಗೂ ಹೊಣೆಗಾರಿಕೆಯಲ್ಲಿ ನಡೆಸತಕ್ಕದ್ದು.

(2) ಈ ಪರೀಕ್ಷೆಯನ್ನು ಕಿಯಾನಿಕ್ಸ್ ಸಂಸ್ಥೆಯು ನಡೆಸಲು ಸಿದ್ಧವಿರುವುದರ ಬಗ್ಗೆ ತಿಳಿಸುತ್ತಿರುವುದರಿಂದ ಈ ಬಗ್ಗೆಯೂ ಪರಿಶೀಲಿಸಿ ಸಿಆಸು(ಇ-ಆಡಳಿತ) ಇಲಾಖೆಯು ಈ ಬಗ್ಗೆ ಟೆಂಡರ್ ಕರೆಯುವ ಮೂಲಕವಾಗಲೀ ಅಥವಾ ಕೆಟಿಟಿಪಿ ಕಾಯ್ದೆಯಡಿ ವಿನಾಯಿತಿ ಪಡೆಯುವ ಬಗ್ಗೆಯಾಗಲೀ ಪರಿಶೀಲಿಸಿ ನಿಯಮಾನುಸಾರ ಪರೀಕ್ಷೆಯ ಕಾರ್ಯಗಳನ್ನು ಕಿಯಾನಿಕ್ಸ್ ಸಂಸ್ಥೆಯ ಮೂಲಕ ಅವಶ್ಯವಿದ್ದಲ್ಲಿ ಜಿಲ್ಲಾಧಿಕಾರಿಗಳ ಸಹಕಾರದಿಂದ/ ಜಿಲ್ಲಾ ತರಬೇತಿ ಸಂಸ್ಥೆಗಳ ನೆರವಿನಿಂದ ನಡೆಸುವ ಬಗ್ಗೆಯೂ ಪರಿಶೀಲಿಸಿ ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಿ ಅವಶ್ಯಕ ಕ್ರಮಗಳನ್ನು ಅತಿ ಶೀಘ್ರವಾಗಿ ತೆಗೆದುಕೊಳ್ಳಬೇಕು.

(3) ಈಗಾಗಲೇ ಹೆಚ್.ಆರ್.ಎಂ.ಎಸ್ ಯೋಜನೆಯಡಿ ಸರ್ಕಾರಿ ನೌಕರರ ವಿವರಗಳು ವಿಶಿಷ್ಟವಾದ ಗುರುತಿನ ಸಂಖ್ಯೆಯೊಂದಿಗೆ ದಾಖಲಾಗಿರುವುದರಿಂದ ಈ ವ್ಯವಸ್ಥೆಯೊಡನೆ ಅವಶ್ಯಕತೆಯಿದ್ದಲ್ಲಿ ಲಿಂಕೇಜ್ ಮಾಡಿ ಆನ್‌ಲೈನ್ ಪರೀಕ್ಷೆಗಳನ್ನು ಮೇಲೆ ತಿಳಿಸಿದಂತೆ 3 ತಿಂಗಳಿಗೊಮ್ಮೆ ನಡೆಸುವುದು; ಪರೀಕ್ಷಾ ವಿಧಾನವನ್ನು ಆದಷ್ಟು ಸರಳೀಕರಿಸಿ ಪರೀಕ್ಷಾ ಪ್ರಮಾಣ ಪತ್ರ ಪಡೆಯುವವರೆಗಿನ ಪೂರ್ಣ

-153-

ವ್ಯವಸ್ಥೆಯು ಆನ್ ಲೈನ್ ಮೂಲಕ ನಡೆಯುವಂತೆಯೂ ಇ-ಆಡಳಿತ ಇಲಾಖೆಯು ಅವಕಾಶ ಕಲ್ಪಿಸುವುದು;

(4) ಇ-ಆಡಳಿತ ಇಲಾಖೆಯು ಈ ಬಗ್ಗೆ ಕೇಂದ್ರೀಕೃತ ಪ್ರೊಸೆಸಿಂಗ್ (centralized processing) ವ್ಯವಸ್ಥೆ ಇಡತಕ್ಕದ್ದು ಹಾಗೂ ಈ ಬಗ್ಗೆ ಫ್ಲೋ ಚಾರ್ಟ್ ತಯಾರಿಸಿ, ಕ್ವೆಶ್ಚನ್ ಬ್ಯಾಂಕ್‌ನ್ನು ತಯಾರಿಸಬೇಕು; ಈಗಾಗಲೇ ಕಿಯಾನಿಕ್ಸ್ ಸಂಸ್ಥೆಯು ತಯಾರಿಸಿರುವ ಕ್ವೆಶ್ಚನ್ ಬ್ಯಾಂಕು ಹಾಗೂ ಇತರೆ ಪಠ್ಯಕ್ರಮಗಳು ಸರ್ಕಾರವು ನಿಗದಿಪಡಿಸಿರುವ ಪಠ್ಯಕ್ರಮದಂತೆಯೇ ಇರುವ ಬಗ್ಗೆ ಖಚಿತಪಡಿಸಿಕೊಂಡು ಅನುಮತಿ ನೀಡಬಹುದು.

2. ವಿವಿಧ ಇಲಾಖೆ ಇತ್ಯಾದಿಗಳು ಪ್ರಾಯೋಜಿಸುವ ಗಣಕ ತರಬೇತಿ ಹಾಗೂ ಐಟಿ-ಹಾರ್ಡ್‌ವೇರ್, ಐಟಿ-ಸಾಫ್ಟ್‌ವೇರ್ ಮತ್ತು ವಿದ್ಯುನ್ಮಾನ ಉಪಕರಣಗಳ ಖರೀದಿ ಸೇವೆ, ಎ.ಎಂ.ಸಿ (ವಾರ್ಷಿಕ ನಿರ್ವಹಣೆ), ಡಾಟಾ ಎಂಟ್ರಿ, ಐಟಿ ಸಲ್ಯೂಷನ್ (ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್) ಅಭಿವೃದ್ಧಿ ಮತ್ತು ನಿರ್ವಹಣೆ, ಐಟಿ-ನೆಟ್‌ವರ್ಕಿಂಗ್, ಐಟಿ-ಕನ್ಸಲ್‌ಟೆನ್ಸಿ, ಐಟಿ-ಎನೇಬೆಲ್ಡ್ (ITES) ಸೇವೆ ಹಾಗೂ ಇ-ಗವರ್ನೆನ್ಸ್ (e-Governance) (ವಿದ್ಯುನ್ಮಾನ ಆಡಳಿತ) ಪ್ರಾಜೆಕ್ಟ್‌ಗಳ ಸೇವೆಗಳನ್ನು ಕಿಯಾನಿಕ್ಸ್ ಸಂಸ್ಥೆಯಿಂದ ಪಡೆಯಲು ಮೇಲೆ (6)ರಲ್ಲಿ ಓದಲಾದ ದಿನಾಂಕ: 29.01.2014ರ ಅಧಿಸೂಚನೆಯನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಕಲಂ 4(ಜಿ) ಅಡಿ ವಿನಾಯಿತಿ ನೀಡಲಾಗಿದೆ. ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 34 ಇಆಇ 2012, ಬೆಂಗಳೂರು ದಿನಾಂಕ: 28ನೇ ಮಾರ್ಚ್ 2014</u>

3. ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ, ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012ರಡಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸುವ ಕಾರ್ಯವನ್ನು, ಮೇಲೆ (6)ರಲ್ಲಿ ಓದಲಾದ ದಿನಾಂಕ: 29.01.2014ರ ಅಧಿಸೂಚನೆಯನ್ವಯ ನೀಡಿದ ವಿನಾಯಿತಿಯಂತೆ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯಾನಿಕ್ಸ್)ಗೆ ವಹಿಸಲು ಈ ಮೂಲಕ ಸರ್ಕಾರದ ಮಂಜೂರಾತಿ ನೀಡಿದೆ. ದಿನಾಂಕ: 29.01.2014ರ ಸದರಿ ಅಧಿಸೂಚನೆಯನ್ವಯ ವಿಧಿಸಿದ ಷರತ್ತಿನ ಪ್ರಕಾರ, ಕಿಯಾನಿಕ್ಸ್ ಸಂಸ್ಥೆಯು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸುವ ಸಂಬಂಧ ಸರಬರಾಜು, ಸೇವೆಯನ್ನು ತನ್ನ ಆಂತರಿಕ ಸಂಪನ್ಮೂಲಗಳಿಂದ ಒದಗಿಸದೇ ಬಾಹ್ಯ ಮೂಲಗಳಿಂದ ಪಡೆಯುವುದಾದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000 ಮತ್ತು ಇ-ಸಂಗ್ರಹಣಾ ಆದೇಶಗಳ ನಿಬಂಧನೆಗಳನ್ನು ಆ ಸಂಸ್ಥೆಯು ಅನುಸರಿಸತಕ್ಕದ್ದು. ಈ ಉದ್ದೇಶಕ್ಕಾಗಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯ ಆಡಳಿತ ವ್ಯಾಪ್ತಿಗೆ ಬರುವ ಸಂಸ್ಥೆ (society) ಯಾದ ಇ-ಆಡಳಿತ ಕೇಂದ್ರ ಸೂಕ್ತ ಟೆಂಡರ್ {Request for Proposal (RFP)}ಅನ್ನು ತಯಾರಿಸಿ ಕಿಯಾನಿಕ್ಸ್‌ಗೆ ನೀಡತಕ್ಕದ್ದು ಹಾಗೂ ಅದನ್ನು ಕಿಯಾನಿಕ್ಸ್ ಸಂಸ್ಥೆಯು ಅನುಸರಿಸತಕ್ಕದ್ದು.

4. ಸದರಿ ಪರೀಕ್ಷೆಯನ್ನು ಸೂಕ್ತ ರೀತಿಯಲ್ಲಿ ಮತ್ತು ಸಕಾಲದಲ್ಲಿ ನಡೆಸುವ ಸಲುವಾಗಿ ಕಿಯಾನಿಕ್ಸ್ ಮತ್ತಿತರರೊಂದಿಗೆ ಸಮನ್ವಯ ಮಾಡಲು ಮತ್ತು ಉಸ್ತುವಾರಿ ಮಾಡಲು ಇ-ಆಡಳಿತ ಕೇಂದ್ರವನ್ನು ಸಮನ್ವಯ ಮಾಡುವ ಸಂಸ್ಥೆ (nodal agency) ಯನ್ನಾಗಿ ಈ ಮೂಲಕ ಪದನಾಮೀಕರಿಸಿದೆ.

5. ದಿನಾಂಕ: 24.01.2014ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ, ಮೇಲಿನ ಕಂಡಿಕೆ-1ರಲ್ಲಿ ಉಲ್ಲೇಖಿಸಿದ, ಸಭೆಯ ನಡವಳಿಗಳ ಪ್ರಕಾರ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸಲು ಅಗತ್ಯ ಕ್ರಮಗಳನ್ನು ಇ-ಆಡಳಿತ ಕೇಂದ್ರದ ವತಿಯಿಂದ ತೆಗೆದುಕೊಳ್ಳತಕ್ಕದ್ದು.

6. ಸದರಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸಲು ಆಗುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "3451-00-090-2-0-059 ವಿದ್ಯುನ್ಮಾನ ಆಡಳಿತ ಯೋಜನೆ-ಇತರೆ ವೆಚ್ಚಗಳು (ಯೋಜನೆ)"ಯಡಿ ಭರಿಸತಕ್ಕದ್ದು.

- 152 -

7. ಆರ್ಥಿಕ ಇಲಾಖೆಯ ದಿನಾಂಕ: 13.03.2014ರ ಟಿಪ್ಪಣಿ ಸಂಖ್ಯೆ: ಆಇ 228 ವೆಚ್ಚ-12 2014ರನ್ವಯ ಆರ್ಥಿಕ ಇಲಾಖೆ ನೀಡಿದ ಸಹಮತಿಯಂತೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ವೀಣಾ)
ಪೀಠಾಧಿಕಾರಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

ರವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ- ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಪೀಠಾಧಿಕಾರಿ-1, ಸಿಆಸುಇ(ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

ಪ್ರತಿ

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರುಗಳು
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳು
3. ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು-570 011
4. ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
5. ಮಹಾಲೇಖಪಾಲರು, ಆಡಿಟ್ 1 ಮತ್ತು 2, ಕರ್ನಾಟಕ, ಬೆಂಗಳೂರು
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಯವರುಗಳು
8. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರುಗಳು
9. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿ ಕಟ್ಟಡ, ಬೆಂಗಳೂರು
10. ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸುಇ(ಸೇವಾ ನಿಯಮಗಳು)
11. ಜಿಲ್ಲಾ ಆಡಳಿತ ಸಂಸ್ಥೆಗಳ ಎಲ್ಲಾ ಪ್ರಾಂಶುಪಾಲರು
12. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
13. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹಾಗೂ ಸಿಆಸುಇ(ಇ-ಆಡಳಿತ)
14. ಶಾಖಾಧಿಕಾರಿ, ಆರ್ಥಿಕ ಇಲಾಖೆ (ವೆಚ್ಚ-12), ವಿಧಾನ ಸೌಧ, ಬೆಂಗಳೂರು
15. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು
16. ಸರ್ಕಾರದ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ), ಇವರ ಆಪ್ತ ಸಹಾಯಕರು
17. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು